**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 16-12-2025:</u>**

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಎನ್ ವಿ ವಕೀಲರಿಂದಃ</u>**

ಈ ಪ್ರಕರಣವನ್ನು ಹೊರತುಪಡಿಸಿ ಇದಕ್ಕಿಂತ ಹಿಂದೆ ಇಂತಹ ಪ್ರಕರಣದಲ್ಲಿ ನಾನು ಪೂರ್ಣ ತನಿಖೆ ಯಾವುದೇ ಪ್ರಕರಣಗಳಲ್ಲಿ ಮಾಡಿಲ್ಲ.

2.ನಾನು ಸಂಬಂಧಪಟ್ಟ ಇಲಾಖೆಗೆ ಪಂಚರಾಗಿ ಗೃಹೋಪಯೋಗಿ ವಸ್ತುಗಳು, ಅಲಂಕಾರಿಕ ವಸ್ತುಗಳು, ಯಂತ್ರೋಪಕರಣಗಳು, ದಿನಸಿ ವಸ್ತುಗಳು, ಪೀಠೋಪಕರಣಗಳು ಇತ್ಯಾದಿಗಳ ಬಗ್ಗೆ ಮಾಹಿತಿ ಇರುವವರನ್ನು ಕಳುಹಿಸಿ ಎಂದು ಕೇಳಿಕೊಂಡಿಲ್ಲ. ಇಂತಹ ಪ್ರಕರಣಗಳಲ್ಲಿ ಇದಕ್ಕಿಂತ ಹಿಂದೆ ನಾನು ದಾಳಿಯ ಭಾಗವಾಗಿ ಭಾಗವಹಿಸಿದ್ದು ಇದೆಯಾ ಎಂದರೆ ನೆನಪಿಲ್ಲ. 3 ಸ್ಥಳಗಳಿಗೆ ನಾನು ಖುದ್ದಾಗಿ ಭೇಟಿ ಕೊಟ್ಟದ್ದು ಇದೆಯಾ ಎಂದರೆ ಸಾಕ್ಷಿಯು ಶೋಧನಾ ವಾರೆಂಟಿನಂತೆ ಇತರ ಅಧಿಕಾರಿಗಳು ತನಿಖೆ ನಡೆಸುತ್ತಿದ್ದ ಕಾಲದಲ್ಲಿ ಭೇಟಿ ಕೊಟ್ಟು ಮೇಲ್ವಿಚಾರಣೆ ನಡೆಸಿ ಬಂದಿರುತ್ತೇನೆ ಎನ್ನುತ್ತಾರೆ. ಸಾಮಾನ್ಯವಾಗಿ ದಾಳಿಯನ್ನು ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಒಂದು ಸ್ಥಳಕ್ಕಿಂತ ಹೆಚ್ಚು ಸ್ಥಳದಲ್ಲಿ ಮಾಡುವಾಗ ಏಕಕಾಲದಲ್ಲಿ ನಡೆಸುತ್ತೇವೆ ಎಂದರೆ ನಿಜ. ಈ ಪ್ರಕರಣದಲ್ಲಿ ಆ ಇಬ್ಬರೂ ತನಿಖಾಧಿಕಾರಿಗಳಿಗೆ ದಾಳಿಯನ್ನು ಏಕಕಾಲದಲ್ಲಿ ಮಾಡಲು ಸೂಚನೆ ಕೊಟ್ಟಿದ್ದೇನಾ ಎಂದರೆ ಸಾಕ್ಷಿಯು ಒಬ್ಬರಿಗೆ ಎರಡು ವಾರೆಂಟ್ ನೀಡಿರುತ್ತೇನೆ, ಇನ್ನೊಬ್ಬರಿಗೆ ಒಂದು ವಾರೆಂಟ್ ನೀಡಿರುತ್ತೇನೆ, ಎರಡು ವಾರೆಂಟ್ ನೀಡಿದವರು ಒಂದನ್ನು ಕಾರ್ಯಗತ ಮಾಡಿದ ನಂತರ ಇನ್ನೊಂದನ್ನು ಕಾರ್ಯಗತಗೊಳಿಸುವಂತೆ ಸೂಚನೆ ನೀಡಿರುತ್ತೇನೆ ಎನ್ನುತ್ತಾರೆ. ಆ ತನಿಖಾಧಿಕಾರಿಗಳಿಗೆ ಅಕ್ಕಸಾಲಿಗರನ್ನು ನಾನು ನಿಯೋಜನೆ ಮಾಡಿಕೊಟ್ಟಿಲ್ಲ, ಅವರವರೇ ಕರೆಸಿಕೊಂಡಿರುತ್ತಾರೆ.

3.ಪೀಠೋಪಕರಣಗಳ ಮೌಲ್ಯಮಾಪನವನ್ನು ಸ್ಥಳದಲ್ಲಿ ಮಾಡಲು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ನಾನು ಕರೆಸಿಕೊಂಡಿಲ್ಲ. ಆದ್ದರಿಂದ ಅಲ್ಲಿ ಮಾಡಿರುವ ಮೌಲ್ಯ ಊಹೆಯ ಮಾಡಿರುವುದು ಎಂದರೆ ಸಾಕ್ಷಿಯು ಅಂದಾಜು ಮೇಲೆ ಮಾಡಿರುವುದು ಎನ್ನುತ್ತಾರೆ. ಆ ಪೀಠೋಪಕರಣವನ್ನು ನೋಡಿ ಅದು ಇಂತಹದೇ ಮರದಿಂದ ಮಾಡಿದ್ದು ಅದರ ಮೌಲ್ಯ ಇಷ್ಟೇ ಎಂದು

ಹೇಳುವ ಪರಿಣಿತಿ ನನಗೆ ಇದೆಯಾ ಎಂದರೆ ಸಾಕ್ಷಿಯು ಮೌಲ್ಯ ಹೇಳಲು ಬರುವುದಿಲ್ಲ, ಆದರೆ ಜಾತಿ ಇಂತಹದೇ ಎಂದು ಹೇಳಬಲ್ಲೆ ಎನ್ನುತ್ತಾರೆ. ನಾನು ಮೇಲ್ವಿಚಾರಣೆ ಮಾಡುವ ಸಮಯದಲ್ಲಿ ಆ ಮನೆಗಳಲ್ಲಿ ದೂರೆತಂತಹ ಪೀಠೋಪಕರಣಗಳ ಬೆಲೆಯನ್ನು ನಾನು ಹೇಳಿ ಬರೆಸಿಲ್ಲ. ಅಲ್ಲಿ ಇದ್ದಂತಹ ಎಲೆಕ್ಟ್ರಾನಿಕ್ ವಸ್ತುಗಳ ಬಗ್ಗೆ ಮೌಲ್ಯಮಾಪನ ಮಡುವ ಪರಿಣಿತಿ ನನಗೆ ಇರಲಿಲ್ಲ. ಅಲ್ಲಿ ಇದ್ದಂತಹ ಸಿಬ್ಬಂದಿ ಹಾಗೂ ಪಂಚರಿಗೆ ಇತ್ತೋಇಲ್ಲವೋ ಎಂದು ನನಗೆ ಹೇಳಲಾಗುವುದಿಲ್ಲ. ಸ್ಥಳಕ್ಕೆ ಎಲೆಕ್ಟ್ರಿಷಿಯನ್ ನ್ನು ಕರೆಸುವ ಪ್ರಯತ್ನ ನಾನೂ  ಮಾಡಿಲ್ಲ, ಅವರೂ ಮಾಡಿಲ್ಲ. ಹಾಗೆಯೇ ಅಲ್ಲಿದ್ದ ಯಂತ್ರೋಪಕರಣಗಳ ಮೌಲ್ಯಮಾಪನ ಮಾಡುವ ಪರಿಣಿತಿ ನನಗೆ ಇರಲಿಲ್ಲ ಹಾಗೂ ಅಲ್ಲಿದ್ದ ಸಿಬ್ಬಂದಿಗಳ ಹಾಗೂ ಪಂಚರಿಗೆ ಆ ಪರಿಣಿತಿ ಇತ್ತೋ ಎಂಬುದು ನನಗೆ ಗೊತ್ತಿಲ್ಲ. ಸ್ಥಳಕ್ಕೆ ಪರಿಣಿತಿ ಇದ್ದ ವ್ಯಕ್ತಿಗಳನ್ನು ಕರೆಸುವ ಪ್ರಯತ್ನ ಮಾಡಿಲ್ಲ. ಹಾಗೆಯೇ ಅಲ್ಲಿದ್ದ ಬಟ್ಟೆಗಳ ಮೌಲ್ಯಮಾಪನ ಮಾಡುವ ಪರಿಣಿತಿ ನನಗೆ ಇರಲಿಲ್ಲ ಹಾಗೂ ಅಲ್ಲಿದ್ದ ಸಿಬ್ಬಂದಿಗಳ ಹಾಗೂ ಪಂಚರಿಗೆ ಆ ಪರಿಣಿತಿ ಇತ್ತೋ ಎಂಬುದು ನನಗೆ ಗೊತ್ತಿಲ್ಲ ಹಾಗೂ ಅಲ್ಲಿಗೆ ಪರಿಣಿತಿ ಇದ್ದವರನ್ನು ಕರೆಸುವ ಪ್ರಯತ್ನ ಮಾಡಿಲ್ಲ. ಹಾಗೆಯೇ ಗ್ರಾನೈಟ್ ಗಳ ಮೌಲ್ಯಮಾಪನ ಮಾಡುವ ಪರಿಣಿತಿ ನನಗೆ ಇರಲಿಲ್ಲ ಹಾಗೂ ಅಲ್ಲಿದ್ದ ಸಿಬ್ಬಂದಿಗಳ ಹಾಗೂ ಪಂಚರಿಗೆ ಆ ಪರಿಣಿತಿ ಇತ್ತೋ ಎಂಬುದು ನನಗೆ ಗೊತ್ತಿಲ್ಲ ಹಾಗೂ ಅಲ್ಲಿಗೆ ಪರಿಣಿತಿ ಇದ್ದವರನ್ನು ಕರೆಸುವ ಪ್ರಯತ್ನ ಮಾಡಿಲ್ಲ.

4.ಆರೋಪಿತರ ಹೌಸಿಂಗ್ ಬೋರ್ಡ್ ನಲ್ಲಿದ್ದ ಮನೆಗೆ ಶೋಧನಾ ವಾರೆಂಟನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ನಾನು ಅಲ್ಲಿ ಇರಲಿಲ್ಲ. ಆದ್ದರಿಂದ ಆ ಮನೆಯಲ್ಲಿ ಆ ಸಮಯದಲ್ಲಿ ಯಾರು ಯಾರು ಇದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

(ಈಹಂತದಲ್ಲಿ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿರುತ್ತಾರೆ, ಸಮಯ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**